ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
C/o ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹುಮಹಡಿಗಳ ಕಟ್ಟಡ, ಡಾ:ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560001.
E-mail ID: icpssarakar@gmail.com Ph.No.080-22879382

ಸಂಖ್ಯೆ: ಐಸಿಪಿಎಸ್/VPY-03/2020-21 ದಿನಾಂಕ:06.07.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಎಲ್ಲಾ ಜಿಲ್ಲೆಗಳು.

ಮಾನ್ಯರೇ,

ವಿಷಯ: ಜಿಲ್ಲಾ ವ್ಯಾಪ್ತಿಯಲ್ಲಿ ವಿಶೇಷವಾಗಿ ಹೆಚ್ಐವಿ ಸೋಂಕಿತ (Positive) ಮಕ್ಕಳಿಗಾಗಿಯೇ ಕಾರ್ಯ ನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳ ಮಾಹಿತಿಯನ್ನು ಸಲ್ಲಿಸಲು ತಿಳಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ಮಮಇ 87 ಮಬಾಬ 2017, ದಿನಾಂಕ:26-09-2017.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಹೆಚ್ಐವಿ/ಏಡ್ಸ್ ಸೋಂಕಿತ/ಬಾಧಿತ ಹಾಗೂ ಏಡ್ಸ್‌ನಿಂದ ಪಾಲಕರನ್ನು ಕಳೆದುಕೊಂಡ ಅನಾಥ ಮತ್ತು ಸಂಕಷ್ಟದಲ್ಲಿರುವ ಮಕ್ಕಳ ಪಾಲನೆಗೆ ಬೆಂಬಲ ಒದಗಿಸುವ ಸಲುವಾಗಿ ರಾಜ್ಯ ಸರ್ಕಾರವು "ಮಕ್ಕಳಿಗಾಗಿ ವಿಶೇಷ ಪಾಲನಾ" ಯೋಜನೆಯನ್ನು ಜಾರಿಗೆ ತಂದಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಜಿಲ್ಲಾ ART (Anti Retro Viral Therapy) ಕೇಂದ್ರದಲ್ಲಿ ನೊಂದಾಯಿಸಿರುವ ಕುಟುಂಬಗಳ ಮಾಹಿತಿಯನ್ನು ಪಡೆದು ಗೃಹ ಅಧ್ಯಯನ ನಡೆಸಿ, ಪ್ರತೀ ಕುಟುಂಬದ ಅವಶ್ಯಕತೆಯನ್ನು ಗುರುತಿಸಿ, ಸರ್ಕಾರದ ವಿವಿಧ ಯೋಜನೆಯಡಿ ಇರುವ ಸೌಕರ್ಯವನ್ನು ಹೊರತುಪಡಿಸಿ, ಈ ಯೋಜನೆಯ ವ್ಯಾಪ್ತಿಗೊಳಪಡಿಸಲು ಒಪ್ಪಿಗೆ ಪಡೆದು ಯೋಜನೆಯನ್ನು ಈಗಾಗಲೇ ಅನುಷ್ಠಾನಗೊಳಿಸಲಾಗುತ್ತಿದೆ.

ಮುಂದುವರೆದಂತೆ, ಸರ್ಕಾರಿ ಆದೇಶದಲ್ಲಿ ಸಾಂಸ್ಥಿಕ ಮತ್ತು ಅಸಾಂಸ್ಥಿಕ ರೂಪದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅವಕಾಶವಿದೆ. (ಹೆಚ್ಚಿನ ಮಾಹಿತಿಗಾಗಿ ಆದೇಶದ ಅನುಬಂಧವನ್ನು ಪರಿಶೀಲಿಸುವುದು).

**ಸಾಂಸ್ಥಿಕ ಸೇವೆ:** ಮಕ್ಕಳನ್ನು ಆರೈಕೆ ಮಾಡಲು ಯಾವುದೇ ಕೌಟುಂಬಿಕ ವ್ಯವಸ್ಥೆ ಇಲ್ಲದ ಸಂದರ್ಭಗಳಲ್ಲಿ ಒದಗಿಸುವ ಸೇವೆ ಸಾಂಸ್ಥಿಕ ಸೇವೆಯಾಗಿರುತ್ತದೆ.

.........2

ಆದ್ದರಿಂದ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ವಿಶೇಷವಾಗಿ (Exclusively) ಹೆಚ್‌ಐವಿ ಸೋಂಕಿತ ಮಕ್ಕಳ ಪಾಲನೆ ಮತ್ತು ರಕ್ಷಣೆಗಾಗಿಯೇ ಪುನರ್ವಸತಿ ಕಲ್ಪಿಸಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಿದ್ದಲ್ಲಿ ಅವುಗಳ ವಿವರ (ವಿಳಾಸ, ದೂರವಾಣಿ ಸಂಖ್ಯೆಯೊಂದಿಗೆ) ಹಾಗೂ ಪ್ರಸ್ತುತ ಆ ಸಂಸ್ಥೆಗಳಲ್ಲಿರುವ ಮಕ್ಕಳ ಸಂಖ್ಯೆ ಹಾಗೂ ಸದರಿ ಮಕ್ಕಳ ಪಾಲನಾ ಸಂಸ್ಥೆಯು ಯಾವ ಮೂಲದಲ್ಲಿ ಆರ್ಥಿಕ ವೆಚ್ಚವನ್ನು ಭರಿಸುತ್ತಿದೆ ಎಂಬ ಅಂಶಗಳನ್ನು ಹಾಗೂ ಸಂಸ್ಥೆಯು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015ರ ಅಡಿಯಲ್ಲಿ ನೊಂದಣಿಯಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಿ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ದಿನಾಂಕ: 15-08-2020ರೊಳಗೆ ಕೇಂದ್ರ ಕಛೇರಿಗೆ ಸಲ್ಲಿಸಲು ತಿಳಿಸಿದೆ.

ತಮ್ಮ ವಿಶ್ವಾಸಿ.

13.07.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

D\Shobha\Letters Sup

ಆದ್ದರಿಂದ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ವಿಶೇಷವಾಗಿ (Exclusively) ಹೆಚ್‌ಐವಿ ಸೋಂಕಿತ ಮಕ್ಕಳ ಪಾಲನೆ ಮತ್ತು ರಕ್ಷಣೆಗಾಗಿಯೇ ಪುನರ್ವಸತಿ ಕಲ್ಪಿಸಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಿದ್ದಲ್ಲಿ ಅವುಗಳ ವಿವರ (ವಿಳಾಸ, ದೂರವಾಣಿ ಸಂಖ್ಯೆಯೊಂದಿಗೆ) ಹಾಗೂ ಪ್ರಸ್ತುತ ಆ ಸಂಸ್ಥೆಗಳಲ್ಲಿರುವ ಮಕ್ಕಳ ಸಂಖ್ಯೆ ಹಾಗೂ ಸದರಿ ಮಕ್ಕಳ ಪಾಲನಾ ಸಂಸ್ಥೆಯು ಯಾವ ಮೂಲದಲ್ಲಿ ಆರ್ಥಿಕ ವೆಚ್ಚವನ್ನು ಭರಿಸುತ್ತಿದೆ ಎಂಬ ಅಂಶಗಳನ್ನು ಹಾಗೂ ಸಂಸ್ಥೆಯು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015ರ ಅಡಿಯಲ್ಲಿ ನೊಂದಣಿಯಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಿ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ದಿನಾಂಕ: 15-08-2020ರೊಳಗೆ ಕೇಂದ್ರ ಕಛೇರಿಗೆ ಸಲ್ಲಿಸಲು ತಿಳಿಸಿದೆ.

ತಮ್ಮ ವಿಶ್ವಾಸಿ,

13.07.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

D\Shobha\Letters Sup

## ನಮೂನೆ

### ಜಿಲ್ಲೆಯಲ್ಲಿ "ವಿಶೇಷವಾಗಿ ಹೆಚ್‌ಐವಿ ಸೋಂಕಿತ ಮಕ್ಕಳಿಗಾಗಿ" ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳ ವಿವರ

| ಕ್ರ. ಸಂ. | ಜಿಲ್ಲೆಯ ಹೆಸರು | ಸಂಸ್ಥೆಯ ಹೆಸರು | ಸಂಸ್ಥೆಯ ಪೂರ್ಣ ವಿಳಾಸ | ಸಂಸ್ಥೆಯ ದೂರವಾಣಿ ಸಂಖ್ಯೆ | ನೊಂದಣಿ ವಿವರ (ನೊಂದಣಿ ಸಂಖ್ಯೆ, ಮತ್ತು ನೊಂದಣಿ ದಿನಾಂಕ) ಯಾವ ಕಾಯ್ದೆ ಎಂದು ಸ್ಪಷ್ಟವಾಗಿ ನಮೂದಿಸುವುದು | ಸಂಸ್ಥೆಗೆ ದಾಖಲಾಗಿರುವ ಎಲ್ಲಾ ಮಕ್ಕಳು ART ಕೇಂದ್ರದಲ್ಲಿ ನೊಂದಣಿಯಾಗಿರುವ ಕುರಿತು ವಿವರ | | ಪ್ರಸ್ತುತ ಸಂಸ್ಥೆಯಲ್ಲಿರುವ ಮಕ್ಕಳ ಸಂಖ್ಯೆ | | | ಅನುದಾನ ಪಡೆಯುತ್ತಿದ್ದಲ್ಲಿ ಅನುದಾನದ ಮೂಲ | ಷರಾ |
|---|---|---|---|---|---|---|---|---|---|---|---|---|
| | | | | | | ART ಕೇಂದ್ರದಲ್ಲಿ ನೊಂದಣಿಯಾದ ಮಕ್ಕಳ ಸಂಖ್ಯೆ | ART ಕೇಂದ್ರದಲ್ಲಿ ನೊಂದಣಿಯಾಗದ ಮಕ್ಕಳ ಸಂಖ್ಯೆ | ಗಂಡು | ಹೆಣ್ಣು | ಒಟ್ಟು | | |
| | | | | | | | | | | | | |

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
______________ ಜಿಲ್ಲೆ.